# ‘ಹಸಿವು ವೃತ್ತಿ–ಬದುಕಿನ ತಿರುವು

## ಸೋನು ಪಾಟೀಲ್
### ಉದಯದ ‘ಮೈನಾ’ ಮರಗುಳಿ ಮಲ್ಲಿಕಾ



◆ **ನಿಮ್ಮ ಪಾತ್ರದ ವಿಶೇಷ ಏನು?**

ಉತ್ತರ ಕರ್ನಾಟಕದ ಕನ್ನಡ ಭಾಷೆಯನ್ನು ಬಳಸುವ ಕಾಮಿಡಿಯನ್ ಪಾತ್ರ ನಿರ್ವಹಿಸುತ್ತಿದ್ದೇನೆ. ನಮ್ಮ ಜವಾರಿ ನುಡಿಯಲ್ಲಿ ಮಾತನಾಡುವುದು ಒಂದು ರೀತಿ ಮಜಾ ಅನ್ನಿಸುತ್ತೆ. ನನ್ನ ಹೆಸರನ್ನು ಸಂಕ್ಷೇಪಿಸಿ ‘ಮಮ’ ಎಂದು ಮಾಡಿದ್ದಾರೆ. ಗಂಭೀರ ಪಾತ್ರಗಳ ನಡುವೆ ಕಾಮಿಡಿ ಪಾತ್ರ ವೀಕ್ಷಕರ ಮನಸ್ಸನ್ನು ಸೆಳೆಯುತ್ತದೆ. ಮಮಗೆ ಮರೆವಿನ ಕಾಯಿಲೆ ಇದೆ. ಅದು ವರವೂ ಹೌದು ಶಾಪವೂ ಹೌದು ಎನ್ನುವ ಸತ್ಯವನ್ನು ಈ ಪಾತ್ರ ನಿರೂಪಿಸುತ್ತದೆ. ಎಂತಹ ಕೆಟ್ಟ ಅನುಭವ ಆಗಿದ್ದರೂ ಅದನ್ನು ಮರೆತು ಆಕೆ ಮತ್ತೆ ನಗು ನಗುತ್ತಾ ಬದುಕುತ್ತಾಳೆ. ನೋವುಗಳನ್ನು ಮರೆಯುವ ಜೊತೆಗೆ ಒಳ್ಳೆಯ ಮಾಹಿತಿಯನ್ನು ಮರೆಯುವುದರಿಂದ ತುಂಬ ಎಡವಟ್ಟುಗಳನ್ನು ಮಾಡಿಕೊಳ್ಳುತ್ತಾಳೆ. ಯಾರೋ ಏನೋ ಒಂದು ಮುಖ್ಯ ವಿಷಯವನ್ನು ಹೇಳಿಕಳಿಸಿದರೆ, ಅದನ್ನು ಮರೆಯುತ್ತಾಳೆ. ಒಮ್ಮೆ ನಾಯಕ ಒಂದು ಪತ್ರವನ್ನು ನಾಯಕಿಗೆ ಕೊಡಬೇಕು ಎಂದು ಕಳಿಸಿದರೆ, ಅದನ್ನು ಬೇರೆ ಇನ್ಯಾರಿಗೋ ಕೊಟ್ಟು ಸಮಸ್ಯೆ ಮತ್ತು ನಗೆಪಾಟಲನ್ನು ಹುಟ್ಟುಹಾಕಿದಂತಹ ಪಾತ್ರ. ಒಳ್ಳೆಯ ತಂಡದ ಜೊತೆ ಕೆಲಸ ಮಾಡುತ್ತಿದ್ದೇನೆ. ‘ಮೈನಾ’ ನಿರ್ದೇಶಕ ಸಂತೋಷ್ ಗೌಡ ಕೂಡ ಇನ್ನೂ ಕ್ರಿಯಾಶೀಲವಾಗಿ ಪಾತ್ರವನ್ನು ಕಟ್ಟುತ್ತಿದ್ದಾರೆ ಎಂದು ಭಾವಿಸಿದ್ದೇನೆ.

◆ **ಪತ್ರಕರ್ತೆ ಆಗಬೇಕಾದವರು ನಟಿ ಆದದ್ದು ಹೇಗೆ?**

ನಟಿ ಆಗಬೇಕು ಎನ್ನುವ ಆಸಕ್ತಿ–ಉದ್ದೇಶ ಎರಡೂ ಇರಲಿಲ್ಲ. ಆಗ ನಟನೆ ಬಗ್ಗೆ ನನಗೆ ಯಾವ ಮಾಹಿತಿಯೂ ಇರಲಿಲ್ಲ. ನನ್ನ ಅಜ್ಜಿಗೆ ನಾನು ಟೀವಿಯಲ್ಲಿ ಬರಬೇಕು ಎನ್ನುವ ಆಸೆ ಇತ್ತು. ಜರ್ನಲಿಸಂ ಎಂ.ಎ. ಮುಗಿಸಿದ ನಂತರ ಪತ್ರಕರ್ತೆ ಆಗಬೇಕಿತ್ತು. ಅದೇ ಕೆಲಸವನ್ನು ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದೆ. ಕೆಲಸ ಸಿಕ್ಕಿರಲಿಲ್ಲ, ಆಗ ತುಂಬ ಕಷ್ಟದ ದಿನಗಳನ್ನು ಎದುರುಗೊಂಡೆ. ಒಮ್ಮೆ ಹಸಿವು ನೀಗಿಸಿಕೊಳ್ಳಲು ಮದುವೆಯಾಗುತ್ತಿದ್ದ ಛತ್ರಕ್ಕೆ ಹೋಗಿದ್ದೆ. ಆಗ ಕಳ್ಳಿ ಎಂದು ನನ್ನ ಮೇಲೆ ಜನ ದಾಳಿ ಮಾಡಲು ಬಂದಿದ್ದರು. ಆ ಅವಮಾನದ ಸಂದರ್ಭವೇ ನನ್ನ ಬದುಕಿನ ಟರ್ನಿಂಗ್ ಪಾಯಿಂಟ್. ವಧುಗೆ ಮೇಕಪ್ ಮಾಡಲು ಬಂದಿದ್ದ ಆರ್ಟಿಸ್ಟ್ ಒಬ್ಬರು ನನ್ನನ್ನು ಗಮನಿಸಿದರು. ಅವರು ನನ್ನನ್ನು ವಿಚಾರಿಸಿ ಯಾಕೆ ಸೀರಿಯಲ್ ಮಾಡಬಾರದು ಎಂಬ ಸಲಹೆ ಕೊಟ್ಟು ಸಂಪರ್ಕಿಸಬೇಕಾದವರ ಫೋನ್ ನಂಬರ್ ಕೊಟ್ಟರು. ಆಕಸ್ಮಿಕವಾಗಿ ಈ ಕ್ಷೇತ್ರಕ್ಕೆ ಬಂದೆ. ಈ ರೀತಿ ಬೆಳೆಯುವೆ ಎಂಬ ಕನಸು ಕಂಡು ಬಂದವಳಲ್ಲ. ಉದಯ ಟೀವಿಗೆ ಮೊದಲು ಬಣ್ಣ ಹಚ್ಚಿದೆ.

‘ಮೊಗ್ಗಿನ ಮನಸು’ ಸೀರಿಯಲ್‌ನಲ್ಲಿ ಪುಟ್ಟ ಪಾತ್ರ ಮಾಡುವ ಮೂಲಕ ಮೊದಲು ಬಣ್ಣ ಹಚ್ಚಿದೆ. ಅದೇ ಅದೃಷ್ಟ ಅನ್ನಿಸುತ್ತದೆ. ಆ ಒಂದು ಸಣ್ಣ ಅವಕಾಶ ‘ಗಾಂಧಾರಿ’, ‘ಅಮೃತ ವರ್ಷಿಣಿ’ಯಲ್ಲಿಯೂ ಚಿಕ್ಕಪುಟ್ಟ ಪಾತ್ರ ಪಡೆಯಲು ಸಹಾಯವಾಯಿತು. ಹೀಗಿದ್ದಾಗಲೇ ಉದಯದಲ್ಲಿ ‘ಸವಾಲ್‌ಗೆ ಸೈ’ ಎನ್ನುವ ರಿಯಾಲಿಟಿ ಶೋನಲ್ಲಿ ಪಾಲ್ಗೊಂಡೆ. ಆ ಕಾರ್ಯಕ್ರಮದ ಸಂಬಂಧ ಚೆನ್ನೈಗೆ ಹೋಗಿದ್ದಾಗ ಅಲ್ಲಿ ನನ್ನನ್ನು ನೋಡಿ ತಮಿಳು ರಿಯಾಲಿಟಿ ಶೋಗೆ ಸೇರಿಸಿಕೊಂಡರು. ಅಲ್ಲಿ ಒಳ್ಳೆಯ ಸಂಭಾವನೆ ಸಿಕ್ಕಿತು. ಅಷ್ಟು ಸಿಗುತ್ತೆ ಎಂಬ ಕಲ್ಪನೆಯನ್ನೇ ಮಾಡಿರಲಿಲ್ಲ. ಅವತ್ತು ಊಟಕ್ಕೆ ಹೋಗದಿದ್ದರೆ ನಟಿ ಆಗುತ್ತಿರಲ್ಲ. ನಾನು ಯಾರು ಎಂದು ಗೊತ್ತಾಗುತ್ತಿರಲಿಲ್ಲ.

‘ದೋಸ್ತಿ ಗ್ಯಾಂಗ್’, ‘ಶ್ರೀಗುರು ಕೊಟ್ಟೂರೇಶ್ವರ’, ‘ಯರ್‍ರಾಬಿರ್‍ರಿ’ ಸಿನಿಮಾದಲ್ಲಿ ನಾಯಕಿ ಆಗಿ ನಟಿಸುವ ಅವಕಾಶವೂ ನನ್ನ ಪಾಲಿಗೆ ಒದಗಿಬಂತು. ಆದರೆ ಅವು ಅಷ್ಟು ಸದ್ದು ಮಾಡಲಿಲ್ಲ. ‘ಬಿಗ್‌ಬಾಸ್’ಗೆ ಸ್ಪರ್ಧಿಸಲು ಕರೆ ಬಂತು. ಯಾವತ್ತೂ ನಾನು ಆ ಯೋಚನೆಯನ್ನೇ ಮಾಡಿರಲಿಲ್ಲ. ಹಾಗಾಗಿ ಅದನ್ನು ನಾನು ಮೊದಲು ನಂಬಲಿಲ್ಲ. ಮೂರ್ಖಳನ್ನಾಗಿ ಮಾಡುತ್ತೀರಿ ಎಂದು ಫೋನ್ ಮಾಡಿದ್ದವರಿಗೆ ಬೈದಿದ್ದೆ. ನಾನು ಪ್ರಯತ್ನ ಮಾಡದೆ ಸಿಕ್ಕ ಅವಕಾಶ ಅದಾಗಿತ್ತು. ಕನ್ನಡ ‘ಬಿಗ್ ಬಾಸ್’ ಬೇರೆಯದೇ ರೀತಿಯ ಇಮೇಜ್ ನೀಡಿತು.

◆ **ನಿಮ್ಮ ಪರಿಚಯ ಮತ್ತು ಅಭಿರುಚಿಯನ್ನು ಹೇಳಿ?**

ಜಮಖಂಡಿ ತಾಲ್ಲೂಕಿನ ಕಡಪಟ್ಟಿ ಎಂಬ ಗ್ರಾಮದವಳು. ನಮ್ಮದು ಕೃಷಿ ಕುಟುಂಬ. ವಿಜಯಪುರದಲ್ಲಿ ಎಂ.ಎ. ಓದಿದೆ. ಯಾವುದಕ್ಕೂ ಹೆದರುವ ಸ್ವಭಾವ ನನ್ನದಲ್ಲ. ಬೈಕ್ ಓಡಿಸುವ ಹುಚ್ಚು. ಸ್ಕೂಟರ್ ಮತ್ತು ಬುಲೆಟ್ ತೆಗೆದುಕೊಂಡಿದ್ದೇನೆ. ಆಟೊಕ್ಕೆ ಹೋಗಲು ದುಡ್ಡಿಲ್ಲದ ನಾನು ಇವತ್ತು ನನ್ನ ಇಷ್ಟದಂತೆ ಬದುಕುತ್ತಿದ್ದೇನೆ. ಊರಿಗೆ ಹೋದರೆ ಟ್ರ್ಯಾಕ್ಟರ್, ಎತ್ತಿನಗಾಡಿಯನ್ನು ಓಡಿಸುತ್ತೇನೆ. ತಂದೆ–ತಾಯಿಯನ್ನು ಚೆನ್ನಾಗಿ ನೋಡಬೇಕು ಎನ್ನುವ ಆಸೆ. ಅನುಕೂಲಸ್ಥ ರೈತಾಪಿ ಮನೆತನದ ನಾವು ಯಾವುದೋ ತೊಂದರೆಯಿಂದ ಆರ್ಥಿಕವಾಗಿ ತುಂಬ ಕಷ್ಟವನ್ನು ಎದುರಿಸಿ ಮತ್ತೆ ಹೊಸ ಬದುಕು ಕಟ್ಟಿಕೊಂಡಿದ್ದೇವೆ.

ಈಗ ಅಭಿನಯವೇ ನನ್ನ ಜಗತ್ತು. ಒಳ್ಳೆಯ ಪಾತ್ರಕ್ಕಾಗಿ ಕಾಯುತ್ತಿದ್ದೇನೆ. ನಾಯಕಿಯೇ ಆಗಬೇಕು ಎನ್ನುವ ಆಸೆಯಿಲ್ಲ. ಕಾಮಿಡಿ ಕೂಡ ಕಲೆ. ಸದ್ಯ ಕಲರ್ಸ್‌ನ ಧಾರಾವಾಹಿ ಒಂದಕ್ಕೆ ಕಾಮಿಡಿ ಪಾತ್ರವನ್ನು ನಿರ್ವಹಿಸುವ ಸಾಧ್ಯತೆ ಇದೆ.

■ **ರಾಘವೇಂದ್ರ ಕೆ.**